# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 403**
**ಮಾನ್ಯ ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ**
**(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)**
**ಉತ್ತರಿಸುವ ದಿನಾಂಕ : 18.07.2024**
**ಉತ್ತರಿಸುವ ಸಚಿವರು. : ಗೃಹ ಸಚಿವರು.**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಒಟ್ಟು ಅಧಿಕೃತ ಖಾಸಗಿ ಪತ್ತೇದಾರಿ ಏಜೆನ್ಸಿಗಳ ಸಂಖ್ಯೆ ಎಷ್ಟು; ಅವು ಯಾವುವು; ಖಾಸಗಿ ಪತ್ತೇದಾರಿ ಏಜೆನ್ಸಿಗಳಿಗೆ ಅನುಮತಿ ನೀಡಲು ಸರ್ಕಾರ ವಿಧಿಸಿರುವ ನಿಯಮ ಹಾಗೂ ನಿಬಂಧನೆಗಳೇನು; | ರಾಜ್ಯದಲ್ಲಿ ಸರ್ಕಾರದಿಂದ ಅನುಮತಿ ಪಡೆದಿರುವ ಯಾವುದೇ ಅಧೀಕೃತ ಖಾಸಗಿ ಪತ್ತೇದಾರಿ ಏಜೆನ್ಸಿಗಳು ಕಾರ್ಯ ನಿರ್ವಹಿಸುತ್ತಿರುವುದಿಲ್ಲ. ಖಾಸಗಿ ಪತ್ತೇದಾರಿ ಏಜೇನ್ಸಿಗಳಿಗೆ ಅನುಮತಿ ನೀಡುವ ಯಾವುದೇ ಕಾಯ್ದೆಗಳು ಅಥವಾ ನಿಯಮಗಳು ಸದ್ಯಕ್ಕೆ ಇರುವುದಿಲ್ಲ. |
| ಆ) | ರಾಜ್ಯದಲ್ಲಿ ಸಾರ್ವಜನಿಕರ ಮೊಬೈಲ್ ಸಂಖ್ಯೆಗಳನ್ನು ಬಳಸಿ ಅವರ ಕರೆಯ ವಿವರಗಳನ್ನು (ಸಿಡಿಆರ್) ಇಲಾಖೆಯ ಸಿಬ್ಬಂದಿಗಳೇ ಶಾಮೀಲಾಗಿ ಖಾಸಗಿ ಪತ್ತೇದಾರಿ ಏಜೆನ್ಸಿಗಳಿಗೆ ಹಾಗೂ ಮೂರನೇ ವ್ಯಕ್ತಿಗೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದುವರೆವಿಗೂ ಇಂತಹ ಎಷ್ಟು ಪ್ರಕರಣಗಳು ದಾಖಲಾಗಿವೆ; (ಸಂಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಸಾರ್ವಜನಿಕರ ಮೊಬೈಲ್ ಸಂಖ್ಯೆಗಳನ್ನು ಬಳಸಿ ಅವರ ಕರೆಯ ವಿವರಗಳನ್ನು (ಸಿಡಿಆರ್) ಇಲಾಖೆಯ ಸಿಬ್ಬಂದಿಗಳೇ ಶಾಮೀಲಾಗಿ ಖಾಸಗಿ ಪತ್ತೇದಾರಿ ಏಜೆನ್ಸಿಗಳಿಗೆ ಹಾಗೂ ಮೂರನೇ ವ್ಯಕ್ತಿಗೆ ಮಾರಾಟ ಮಾಡಿದ ಬಗ್ಗೆ 05 ಪ್ರಕರಣ ದಾಖಲಾಗಿರುತ್ತದೆ. ವಿವರ ಕೆಳಗಿನಂತಿದೆ.<br><br>ಬೆಂಗಳೂರು ನಗರದ ಪಶ್ಚಿಮ ವಿಭಾಗದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಒಟ್ಟು 03 ಪತ್ತೇದಾರಿ ಏಜೆನ್ಸಿಗಳು ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಪ್ರಕರಣ ದಾಖಲಾಗಿರುತ್ತದೆ.<br><br>1. ಎಲಿಗೆಂಟ್ ಡಿಟೆಕ್ಟೀವ್, ಬಸವೇಶ್ವರ ನಗರ, ಬೆಂಗಳೂರು ಈ ಏಜೆನ್ಸಿಯ ವಿರುದ್ಧ ಬಸವೇಶ್ವರನಗರ ಪೊಲೀಸ್ ಠಾಣೆ ಮೊ.ಸಂ: 186/2024 ಕಲಂ: 409, 420, 120(ಬಿ) ಐಪಿಸಿ, ಕಲಂ: 72 ಐಟಿ ಆಕ್ಟ್ ಮತ್ತು ಕಲಂ 25 ಇಂಡಿಯನ್ ಟೆಲಿಗ್ರಾಫ್ ಆಕ್ಟ್ ರೀತ್ಯಾ ಪ್ರಕರಣ ದಾಖಲಿಸಲಾಗಿದೆ.<br>2. ಮಹಾನಗರಿ ಡಿಟೆಕ್ಟಿವ್ & ಸೆಕ್ಯೂರಿಟಿ ಸಲ್ಯೂಷನ್ ಪ್ರೈ.ಲಿ, ಪ್ರಶಾಂತ ನಗರ, ಬೆಂಗಳೂರು ಈ ಏಜೆನ್ಸಿಯ ವಿರುದ್ಧ ಗೋವಿಂದರಾಜನಗರ ಪೊಲೀಸ್ ಠಾಣೆಯ ಮೊ.ಸಂ.199/2024 ಕಲಂ: 409, 420, |

| | | |
|---|---|---|
| | | 120(ಬಿ)ಸಹಿತ 34 ಐಪಿಸಿ, ಕಲಂ:72 ಐಟಿ ಆಕ್ಟ್ ಮತ್ತು ಕಲಂ: 75 ಇಂಡಿಯನ್ ಟೆಲಿಗ್ರಾಫ್ ಆಕ್ಟ್ ರೀತ್ಯಾ ಪ್ರಕರಣ ದಾಖಲಿಸಲಾಗಿರುತ್ತದೆ.<br>3. ರಾಜಧಾನಿ ಕಾರ್ಪೋರೇಟ್ ಸರ್ವೀಸ್, ಗೋವಿಂದರಾಜನಗರ, ಬೆಂಗಳೂರು ನಗರ ಈ ಏಜೆನ್ಸಿಯ ವಿರುದ್ಧ ಗೋವಿಂದರಾಜನಗರ ಪೊಲೀಸ್ ಠಾಣೆ ಮೊ.ಸಂ.200/2024 ಕಲಂ:409, 420, 120(ಬಿ) ಸಹಿತ 34 ಐಪಿಸಿ, ಕಲಂ: 72 ಐ.ಟಿ ಆಕ್ಟ್ ಮತ್ತು ಕಲಂ:75 ಇಂಡಿಯನ್ ಟೆಲಿಗ್ರಾಫ್ ಆಕ್ಟ್ ರೀತ್ಯಾ ಪ್ರಕರಣ ದಾಖಲಿಸಲಾಗಿರುತ್ತದೆ.<br><br>ಮೇಲ್ಕಂಡ ಪ್ರಕರಣಗಳಲ್ಲಿ ಸಿಡಿಆರ್‌ಗಳು ಯಾವ ರೀತಿ ಅನಧೀಕೃತವಾಗಿ ಪಡೆಯಲಾಗಿದೆ ಎಂಬ ಬಗ್ಗೆ ತನಿಖೆ ಪ್ರಗತಿಯಲ್ಲಿದ್ದು, ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ.<br><br>4. ಕಲಬುರಗಿ ನಗರ ವ್ಯಾಪ್ತಿಯ ಸಿಇಎನ್ ಪೊಲೀಸ್ ಠಾಣೆ ಮೊಕ್ಕದಮೆ ಸಂಖ್ಯೆ:50/2023 ಕಲಂ 66(ಇ) ಐಟಿ ಆಕ್ಟ್, ಕಲಂ: 420 ಐಪಿಸಿ ರಲ್ಲಿ ಪಿರ್ಯಾದಿಯಾದ ಗುಂಡಮ್ಮ ತಂದೆ ಉಲ್ಲಪ್ಪಾ ಅರ್ಜುಣಗಿ, ಮಪಿಸಿ ಇವರ ಸಿಡಿಆರ್ ಮಾಹಿತಿಯನ್ನು ಆರೋಪಿತನಾದ ಮಹೇಶ ತಂದೆ ಆನಂದರಾವ ಸಂಗಾವಿ ಸಾ\|\| ಬಸವ ನಗರ ಕಲಬುರಗಿ ಇತನು ಪಡೆದು ಫೋನ್ ಮೂಲಕ ಬ್ಲಾಕ್ ಮೇಲ್ ಮಾಡಿರುವ ಬಗ್ಗೆ ದೂರು ದಾಖಲಾಗಿರುತ್ತದೆ.<br>5. ತುಮಕೂರು ಜಿಲ್ಲೆಯ ದಂಡಿನಶಿವರ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 55/2024 ಕಲಂ 364, 511, 506, 120(ಬಿ) ರೆ/ವಿ 34 ಐಪಿಸಿ ಪ್ರಕರಣದ ಆರೋಪಿಯಾದ ಮಂಜುನಾಥ ರೆಡ್ಡಿ ಬಿನ್ ಗಂಗಾರೆಡ್ಡಿ ರವರಿಗೆ ತುಮಕೂರು ಉಪವಿಭಾಗದ ಡಿವೈಎಸ್‌ಪಿ ರವರಾದ ಶ್ರೀ ಕೆ.ಆರ್.ಚಂದ್ರಶೇಖರ್ ರವರು ತಮ್ಮ ಮೊಬೈಲ್ ನಂಬರ್ 9902037666 ನಿಂದ ಮತ್ತು ಜಯನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮನು, ಸಿಪಿಸಿ-765 ರವರು ತಮ್ಮ ಮೊಬೈಲ್ ನಂಬರ್‌ಗಳಾದ 997219044, 9845227225, 9480612240 ಗಳಿಂದ ಸಿಡಿಆರ್ ಮಾಹಿತಿಯನ್ನು ವಾಟ್ಸಪ್ ಮುಖಾಂತರ ಲೋಕೇಷನ್ ಶೇರ್ ಮಾಡಿರುತ್ತಾರೆ. |

| | | |
|---|---|---|
| ಇ) | ಸಾರ್ವಜನಿಕರಷ್ಟೇ ಅಲ್ಲದೇ ಸರ್ಕಾರದ ಉನ್ನತ ಅಧಿಕಾರಿಗಳ ಕರೆಯ ವಿವರಗಳನ್ನು ದುರುಪಯೋಗ ಪಡೆಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇಂತಹ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ; (ವಿವರ ನೀಡುವುದು) | ಹೌದು, ಈ ಬಗ್ಗೆ, ಬೆಂಗಳೂರು ಜಿಲ್ಲೆಯಲ್ಲಿ 01 ಪ್ರಕರಣ ದಾಖಲಾಗಿರುತ್ತದೆ. ಬೆಂಗಳೂರು ಜಿಲ್ಲೆ ಸಿ.ಇ.ಎನ್ ಪೊಲೀಸ್ ಠಾಣೆ ಅಪರಾಧ ಸಂಖ್ಯೆ:171/2024 ಕಲಂ 72 ಐ.ಟಿ.ಆಕ್ಟ್ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ಡಿಜಿ ಮತ್ತು ಐಜಿಪಿ ರವರ ಕಛೇರಿ ಆದೇಶ ಸಂಖ್ಯೆ: ಸಿಆರ್‌ಎಮ್-4/26/ಬಿಡಿ/2024 ದಿನಾಂಕ:28.05.2024 ರಲ್ಲಿ ಪ್ರಕರಣವನ್ನು ಮುಂದಿನ ತನಿಖೆಗಾಗಿ ಸಿಐಡಿ ಘಟಕಕ್ಕೆ ವರ್ಗಾವಣೆ ಮಾಡಲಾಗಿರುತ್ತದೆ. |
| ಈ) | ಇಂತಹ ಪ್ರಕರಣಗಳು ಮರುಕಳಿಸದಂತೆ ಸರ್ಕಾರ ಕೈಗೊಳ್ಳಬಹುದಾದ ಮುಂಜಾಗ್ರತಾ ಕ್ರಮಗಳೇನು? | ಸಿಡಿಆರ್/ ಐಎಂಇಐ/ ಐಪಿಡಿಆರ್/ ಟವರ್ ಡಂಪ್/ ಎಸ್‌ಡಿಆರ್ ಕೋರಿಕೆಯನ್ನು ನಿಗಧಿತ ನಮೂನೆಯಲ್ಲಿ ಸಂಬಂಧಪಟ್ಟ ಪೊಲೀಸ್ ಠಾಣೆಯಿಂದ ಸಮುಚಿತ ಮಾರ್ಗದಲ್ಲಿ ಸಂಬಂಧಪಟ್ಟ ಡಿವೈಎಸ್‌ಪಿ ರವರು ಅನುಮೋದಿಸಿ ಜಿಲ್ಲಾ ಪೊಲೀಸ್ ಕಛೇರಿಗೆ ಕಳುಹಿಸಲಾಗುತ್ತದೆ. ಸಿಡಿಆರ್ ಮಾಹಿತಿ ಪಡೆಯಲು ಠಾಣೆಯ ಠಾಣಾಧಿಕಾರಿಗಳು ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ದೃಢೀಕೃತ ಪ್ರಮಾಣ ಪತ್ರದಲ್ಲಿ ಸಹಿ, ಮೊಹರು ಮೂಲಕ ಕೋರಿ ಪತ್ರವನ್ನು ಸಲ್ಲಿಸಿ ಮಾಹಿತಿಯನ್ನು ಪಡೆದುಕೊಳ್ಳುವ ವ್ಯವಸ್ಥೆಯನ್ನು ಮಾಡಿ ಕರೆಯ ವಿವರಗಳನ್ನು ದುರುಪಯೋಗಪಡಿಸಿಕೊಳ್ಳದಂತೆ ಕ್ರಮ ವಹಿಸಲಾಗುತ್ತಿರುತ್ತದೆ. |

ಸಂಖ್ಯೆ:ಹೆಚ್‌ಡಿ 30 ಎಸ್‌ಡಿಎನ್ 2024

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು